## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**-233/2003 **PW**-1

**ದಿಃ 14.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 10 ರಿಂದ 12 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**3.** ನಿಐ 1 ರಿಂದ 4 ನ್ನು ಹಾಜರುಪಡಿಸಲು ನನಗೆ ಯಾವದೇ ರೀತಿಯ ತೊಂದರೆ ಇರುವದಿಲ್ಲ. 1994 ರಿಂದ 2001 ರವರೆಗೆ ನೀಡಿದ್ದ ನೋಟೀಸುಗಳ ಪ್ರತಿಗಳನ್ನು ಈಗಾಗಲೇ ಹಾಜರು ಪಡಿಸಿರುತ್ತೇನೆಂದು ನುಡಿಯುತ್ತಾರೆ. ಸಾಕ್ಷಿಗೆ ಅವರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಆ ದಾಖಲೆಗಳು ಯಾವದು ಎಂದು ಕೇಳಲಾಗಿ ಸಾಕ್ಷಿಯು ನಿಪಿ 1 ಮತ್ತು 2 ನ್ನು ತೋರಿಸಿ ಆ ದಾಖಲೆಗಳೇ ಆ ಪ್ರತಿಗಳೆಂದು ನುಡಿಯುತ್ತಾರೆ. 1994 ರಿಂದ 2000 ನೇ ಇಸ್ವಿಯವರೆಗೆ ಒಳಗೆ ಆದಂತಹ ಪತ್ರ ವ್ಯವಹಾರ ಮತ್ತು ನೋಟೀಸುಗಳನ್ನು ಹಾಜರು ಪಡಿಸಿರುವದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 2001 ರ ನಿಪಿ 1 ಮತ್ತು 2 ನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ಈ ಅವದಿಯಲ್ಲಿ ಆದಂತಹ ಪತ್ರ ವ್ಯವಹಾರ ಮತ್ತು ನೋಟೀಸುಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆಂದರೆ ಸರಿ. 1994 ರಲ್ಲಿಯೇ ಬೆನಕಟ್ಟಿ ಕುಟುಂಬದವರು ತಮಗೆ ನೋಟೀಸನ್ನು ಕೊಟ್ಟು ತಾವು ಆಧರಿಸಿರುವಂತಹ ವ್ಯವಹಾರವನ್ನು ಅಲ್ಲಗಳೆದಿರುತ್ತಾರೆಂದರೆ ಸಾಕ್ಷಿಯು ಸುಳ್ಳು ಹೇಳಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ಅಗ್ರಿಮೆಂಟ ಮಾಡಿಕೊಟ್ಟಿಲ್ಲ ಎಂದು ತಿಳಿಸಿದ್ದು ಆದರೆ ನಾನು ಅದರ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. 1994 ರಿಂದ 2000 ನೇ ಇಸ್ವಿಯ ಅವದಿಯಲ್ಲಿ ಆದಂತಹ ಪತ್ರ ವ್ಯವಹಾರ ಮತ್ತು ನೋಟೀಸುಗಳ ಮೂಲ ಪ್ರತಿಯನ್ನು ಹಾಜರುಪಡಿಸಿದರೆ ದಾವೆಯು ಕಾಲಮಿತಿ ಒಳಗೆ ಬರುವದಿಲ್ಲ ಎಂದು ತಿಳಿದು ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವದಿಲ್ಲ ಎಂದರೆ ಸರಿಯಲ್ಲ.

4. ಸಿ ವಿ ರಟ್ಟಿಹಳ್ಳಿ ವಕೀಲರು ಬೆನಕಟ್ಟಿ ಕುಟುಂಬದ ಮೊಕ್ತಿದಾರರು ಎಂದು ಹೇಳಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಸಿ ವಿ ರಟ್ಟಿಹಳ್ಳಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ. ನಾನು ಈೇ ದಾವೆಯನ್ನು ಮಾಡುವ ಪೂರ್ವದಲ್ಲಿ ನನ್ನ ವಕೀಲರಿಗೆ ದಾವಾ ಆಸ್ತಿಗೆ ಸಳಂಬಂದಿಸಿದಂತೆ ಯಾವೆಲ್ಲಾ ವ್ಯವಹಾರಗಳು ಆಗಿದೆ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ನಂತರ ಮಾಹಿತಿಯನ್ನು

ಕೊಟ್ಟಿರುತ್ತೇನೆ. ದಾವೆಯನ್ನು ಹಾಕುವಾಗ ಸಿ ವಿ ರಟ್ಟಿಹಳ್ಳಿ ವಕೀಲರು ಬೆನಕಟ್ಟಿ ಕುಟುಂಬದ ಮೊಕ್ತಿಯಾರರಾಗಿ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. 2003 ರಿಂದ ಇಲ್ಲಿಯವರೆಗೂ ಸಿ ವಿ ರಟ್ಟಿಹಳ್ಳಿ ವಕೀಲರನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡುವ ಪ್ರಯತ್ನ ಮಾಡಿರುವದಿಲ್ಲ. ತಾವು ಹೇಳುವಂತಹ ವ್ಯವಹಾರಕ್ಕೆ ಸಂಬಂದಿಸಿದಂತೆ ಆ ದಿನಾಂಕದಲ್ಲಿ ತಮ್ಮ ಬಳಿ ಅಷ್ಟು ಹಣ ಇತ್ತು ಎಂದು ತೋರಿಸಲು ಯಾವದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು  ಯಾವದೇ ದಾಖಲೆಯನ್ನು ಕೊಡುವ ಅಗತ್ಯತೆ ಇಲ್ಲ ಎನ್ನುತ್ತಾರೇ. ತಮಗೆ ಆರ್ಥಿಕ ಸಾಮರ್ಥ್ಯ ಇತ್ತು ಮತ್ತು ಇದೆ ಎಂದು ತೋರಿಸಲು ಯಾವದೇ ದಾೀಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಯಾವ ಕಾರಣಕ್ಕಾಗಿ ಹಾಜರುಪಡಿಸಬೇಕು ಎಂದು ನುಡಿದು ಸಾಮರ್ಥ್ಯ ಇರುವ ಕಾರಣ ವ್ಯವಹಾರ ಮಾಡಲಾಗಿದೆ ಎಂದು ನುಡಿಯುತ್ತಾರೆ. ಆರ್ಥಿಕ ಸಾಮರ್ಥ್ಯ ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ.

(ಮುಂಜಾನೆಯ ಕಾಲಾವದಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಗೆ ಮದ್ಯಾಹ್ನದ ಕಾಲಾವದಿಗೆ ಮುಂದೂಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**